**ದಿನಾಂಕಃ 05.03.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಸಿ ಬಿ ವಕೀಲರಿಂದಃ-**

1 ನೇ ಆರೋಪಿ ಮತ್ತು ಚಾಸಾ-1 ರವರ ಮದುವೆ ಮಾತುಕತೆಯು ಎಲ್ಲಿ ನಡೆಯಿತು ಎಂಬ ಪ್ರಶ್ನೆಗೆ ಸಾಕ್ಷಿಯು ಬೀರೂರಿನ ತ್ರಿನೇತ್ರ ಕಲ್ಯಾಣ ಮಂಟಪದಲ್ಲಿ ಆಗಸ್ಟ 2016 ರ ಕೊನೆಯ ವಾರದಲ್ಲಿ ನಡೆಯಿತು. ಇದನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಗಂಡ ಎಲ್ ಐ ಸಿ ಯಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ನಿರ್ವಹಿಸಿ ನಿವೃತ್ತಿ ಹೊಂದಿರುತ್ತಾರೆ. ಇದನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಮದುವೆ ಮಾತುಕತೆಯಾದ ಯಾವಾಗ ನಿಶ್ಚಿತಾರ್ಥ ಆಯಿತು ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಶ್ಚಿತಾರ್ಥವು ದಿಃ 26.08.2016 ರಂದು ಬೀರೂರಿನ ತ್ರಿನೇತ್ರ ಕಲ್ಯಾಣ ಮಂಟಪದಲ್ಲಿ ನಡೆಯಿತು. ಇದನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಮದುವೆಯ ಮಾತುಕತೆಯಲ್ಲಿ ಚಾಸಾ-7, 11, 13, 14, 15 ಹಾಗೂ 1 ರಿಂದ 3 ನೇ ಆರೋಪಿತರು ಇದ್ದರು. ಮದುವೆಯ ಮಾತುಕತೆಯಲ್ಲಿ ಜಯರಾಮನಾಯ್ಕ ರವರು ಹಾಜರಿರಲಿಲ್ಲ. ಇದನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ.

ಆರೋಪಿತರು ನಮಗೆ ಹೊಸ ಸಂಬಂಧ ಎಂದರೆ ಸರಿ. ಮದುವೆಯು ಬೆಂಗಳೂರಿನ ಮಿನಾಕ್ಷಿ ಕಲ್ಯಾಣ ಮಂಟಪದಲ್ಲಿ ದಿಃ 08.12.2016 ರಂದು ನಡೆದಿರುತ್ತದೆ. ಮದುವೆ ನಂತರ ಚಾಸಾ-1 ರವರು ಬೆಂಗಳೂರಿನ ಆರೋಪಿತರ ಮನೆಯಲ್ಲಿ ಇದ್ದರು ಎಂದರೆ ಸರಿ. ಸಾಮಾನ್ಯವಾಗಿ ಮದುವೆ ಸಂದರ್ಭದಲ್ಲಿ

ವರನಿಗೆ ಚಿನ್ನಾಭರಣ ಉಡುಗೊರೆ ನೀಡುವ ಪದ್ದತಿ ಇದೆ ಎಂದರೆ ಸರಿಯಲ್ಲ. ಇದನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಮದುವೆಯಾದ ಎಷ್ಟು ದಿನಗಳ ನಂತರ ನನ್ನ ಅಳಿಯ ಮತ್ತು ಮಗಳನ್ನು ಮನೆಗೆ ಕರೆಸಿರುತ್ತೀರಿ ಎಂಬ ಪ್ರಶ್ನೆಗೆ ನಾವು ಅವರನ್ನು ಬರಲು ಹೇಳಿದ ಮೇರೆಗೆ ನನ್ನ ಅಳಿಯ ಮತ್ತು ಮಗಳು ಮದುವೆಯಾದ 4 ದಿನಗಳ ನಂತರ ಬಂದಿರುತ್ತಾರೆ. ಇದನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ನನ್ನ ಅಳಿಯ ಮತ್ತು ಮಗಳು ಬಂದ ಸಮಯದಲ್ಲಿ ನಮ್ಮ ಮನೆಯಲ್ಲಿ ಪೂಜೆ ಇತ್ತು. ಆದಿನ ನನ್ನ ಮನೆಗೆ ಮಗಳು, ಅಳಿಯ, 1 ನೇ ಆರೋಪಿಯ ತಂದೆ ತಾಯಿ ಬಂದಿದ್ದರು. ಆರೋಪಿತರ ಮನೆಯಿಂದ ಈ ನಾಲ್ಕು ಜನರನ್ನು ಹೊರತುಪಡಿಸಿ ಬೇರೆ ಯಾರೂ ಬಂದಿರಲಿಲ್ಲ. ನಮ್ಮ ಕುಟುಂಬದಿಂದ 8 ಜನ ಇದ್ದೆವು. ಇದನ್ನು ನಾನು ಪೋಲಿಸರಲ್ಲಿ ಹೇಳಿರುತ್ತೇನೆ ಆದರೆ ಅದನ್ನು ಅವರು ಬರೆದುಕೊಂಡಿರುವುದಿಲ್ಲ. ದೇವತಾಕಾರ್ಯ ನಡೆದ ನಂತರ 1 ರಿಂದ 3 ನೇ ಆರೋಪಿತರು ಚಾಸಾ-1 ರವರನ್ನು ನಮ್ಮ ಮನೆಯಲ್ಲಿ ಬಿಟ್ಟು ಹೋಗಿರುತ್ತಾರೆ.

ಚಾಸಾ-1 ರವರು ನಮ್ಮ ಮನೆಯಲ್ಲಿ ನಡೆದ ದೇವತಾಕಾರ್ಯದ ಒಂದು ವಾರದ ನಂತರ ಬೆಂಗಳೂರಿಗೆ ಹೋಗಿರುತ್ತಾರೆ. ಇದನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಬೆಂಗಳೂರಿನಲ್ಲಿ ಚಾಸಾ-1 ರವರು 1 ನೇ ಆರೋಪಿಯೊಂದಿಗೆ ಮದುವೆಯಾದ ನಂತರ 2017 ಏಪ್ರಿಲ್ ತಿಂಗಳವರೆಗೆ ಸಂಸಾರ ನಡೆಸಿರುತ್ತಾರೆ. ನನ್ನ ಮಗಳು ಗರ್ಭವತಿಯಾದ ವಿಚಾರ 2017 ರ ಮಾರ್ಚ ತಿಂಗಳಿನಲ್ಲಿ ನನಗೆ ತಿಳಿಯಿತು. ನನ್ನ ಮಗಳು ಗರ್ಭವತಿಯಾದ ಎಷ್ಟು ತಿಂಗಳಲ್ಲಿ ನಿಮ್ಮ ಮನೆಗೆ ಕರೆಸಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು 2017 ರ ಏಪ್ರಿಲ್ ನಲ್ಲಿ ಮಗಳು ಮನೆಗೆ ಬಂದಿರುತ್ತಾಳೆ ಎಂದು ನುಡಿಯುತ್ತಾರೆ. ನನ್ನ ಮಗಳು ಗರ್ಭಧರಿಸಿದ ನಂತರ ಆಕೆಗೆ ಬೆಂಗಳೂರಿನಲ್ಲೆ ಆರೋಪಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿಯು ಒಂದು ಬಾರಿ ಚಿಕಿತ್ಸೆ ಕೊಡಿಸಿದ್ದು ತದನಂತರ ಚಾಸಾ-9 ರವರು ಚಿಕಿತ್ಸೆ ಕೊಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-1 ರವರು ಗರ್ಭದರಿಸಿದ ಎಷ್ಟು ತಿಂಗಳ ನಂತರ ಚಿಕಿತ್ಸೆ ಕೊಡಿಸಿರುತ್ತೀರಾ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಗರ್ಭ ದರಿಸಿದ ನಂತರ ಗಂಡ ಹೆಂಡತಿ ಮಾತ್ರ ಆಸ್ಪತ್ರೆಗೆ ಹೋಗುತ್ತಾರೆ ಎಂದರೆ ಸರಿ.

ಚಾಸಾ-1 ರವರು ಮದುವೆಯ ಪೂರ್ವದಲ್ಲಿ ಅಮೆಜಾನ್ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಚಾಸಾ-1 ರವರಿಗೆ ಎಷ್ಟು ವೇತನ ಇತ್ತು ಎಂದು ನನಗೆ ನೆನಪಿಲ್ಲ. ನನ್ನ ಮಗಳು ಕೆಲಸ ನಿರ್ವಹಿಸುತ್ತಿದ್ದ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಮದುವೆಯಾದ ನಂತರ 1 ನೇ ಆರೋಪಿ ಮತ್ತು ಚಾಸಾ-1 ರವರು ಹನಿಮೂನ್ ಗೆ ಕೇರಾಳಕ್ಕೆ ಹೋಗಿರುವ ವಿಚಾರ ನನಗೆ ಗೊತ್ತಿಲ್ಲ. ಮದುವೆಯಾದ ನಂತರ 1 ನೇ ಆರೋಪಿ ಮತ್ತು ಚಾಸಾ-1 ರವರು ಹನಿಮೂನ್ ಗೆ ಕೇರಾಳಕ್ಕೆ ಹೋಗಿರುವ ವಿಚಾರ ನನಗೆ ಗೊತ್ತಿದ್ದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ಗರ್ಭಧರಿಸುವವರೆಗೂ ಚಾಸಾ-1 ಮತ್ತು 1 ನೇ ಆರೋಪಿಯ ವೈವಾಹಿಕ ಜೀವನ ಚೆನ್ನಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ನಮ್ಮ ಮನೆಗೆ ಬಂದ ನಂತರ

ಮಗು ಜನಿಸಿತು ಎಂಬ ಪ್ರಶ್ನೆಗೆ ಸಾಕ್ಷಿಯು ದಿಃ 12.11.2017 ರಂದು ಮಗು ಜನಿಸಿರುತ್ತದೆ ಎಂದು ನುಡಿಯುತ್ತಾರೆ. ಇದನ್ನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ನಾನು ಹೇಳಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಚಾಸಾ-1 ರವರಿಗೆ ಮಗು ಜನಿಸಿರುವ ವಿಚಾರ ಹೇಳಿರುವುದಿಲ್ಲ.

ಚಾಸಾ-1 ರವರು ಗರ್ಭಧರಿಸಿದ ಸಮಯದಿಂದ ಮಗು ಹುಟ್ಟುವವರೆಗೆ ಹಾಗೂ ನಂತರದ ಎಲ್ಲಾ ವೈದ್ಯಕೀಯ ಖರ್ಚನ್ನು 1 ನೇ ಆರೋಪಿ ಭರಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-14 ರವರು ಎಲ್ ಐ ಸಿ ಏಜೆಂಟರಾಗಿ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿಯು ಅವರು ಕೃಷಿಕರಾಗಿದ್ದು ಎಲ್ ಐ ಸಿ ಏಜೆಂಟರಾಗಿ ಕೆಲಸ ಮಾಡುತ್ತಿರಬಹುದು ಎನ್ನುತ್ತಾರೆ. ಚಾಸಾ-14 ರವರು ರಾಜಕೀಯವಾಗಿಯೂ ಸಕ್ರಿಯರಾಗಿದ್ದಾರೆ ಎಂದರೆ ಸರಿ. ಚಾಸಾ-2 ಮತ್ತು 3 ರವರು ನನ್ನ ಗಂಡನ ಸ್ನೇಹಿತರು ಎಂದರೆ ಸರಿ. ಚಾಸಾ-3 ರವರು ನಮ್ಮ ಮನೆಯ ಪಕ್ಕದ ನಿವಾಸಿ. ಚಾಸಾ-4 ನನ್ನ ಗಂಡನ ಸ್ನೇಹಿತರು ಎಂದರೆ ಸರಿಯಲ್ಲ. ಎಮ್ಮೆದೊಡ್ಡಿ ಗ್ರಾಮದಲ್ಲಿ ನಮಗೆ 3 ಎಕರೆ ಫಸಲು ಬರುವ ಅಡಿಕೆ ತೋಟ ಇರುತ್ತದೆ. ನಮಗೆ ದಾವಣಗೆರೆಯಲ್ಲೂ ಮನೆ ಇರುತ್ತದೆ ಎಂದರೆ ಸರಿ. ನನ್ನ ಗಂಡನಿಗೆ ಊರಿನಲ್ಲಿ 10 ಎಕರೆ ಆಸ್ತಿ ಇದೆ ಎಂದರೆ ಸರಿಯಲ್ಲ. ನಮಗೆ ಬೀರೂರಿನಲ್ಲಿ ಒಂದು ಮನೆ ಇದೆ ಎಂದರೆ ಸರಿ. ದಾವಣಗೆರೆಯಲ್ಲಿರುವ ಮನೆಯನ್ನು ರೂ. 30,000 ಗಳಿಗೆ ಬಾಡಿಗೆಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ದಾವಣಗೆರೆಯಲ್ಲಿರುವ ಮನೆಯ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ ಎಂದರೆ ಸರಿ.

ಚಾಸಾ-10 ನನ್ನ ಮೈದುನ. ಚಾಸಾ-11 ಮತ್ತು 13 ನನ್ನ ತಂಗಿಯಂದಿಯರ ಗಂಡಂದಿರು. ಚಾಸಾ-15 ನನ್ನ ಗಂಡನ ಸ್ನೇಹಿತರು. ಚಾಸಾ-16 ನನ್ನ ಗಂಡನ ಸ್ನೇಹಿತರು ಎಂದರೆ ಇರಬಹುದು. ಚಾಸಾ-19 ನನ್ನ ಗಂಡನ ಸ್ನೇಹಿತ. ಚಾಸಾ-20 ನನ್ನ ಗಂಡನ ಸ್ನೇಹಿತರು. ದೋಷಾರೋಪಣಾ ಪಟ್ಟಿಯಲ್ಲಿ ಹೇಳಿರುವ ಎಲ್ಲಾ ಸಾಕ್ಷಿಗಳೂ ಸಹ ನನ್ನ ಗಂಡನ ಸ್ನೇಹಿತರು ಎಂದರೆ ಸರಿ. ಅವರು ನಮ್ಮ ಮನೆಗೆ ಬಂದು ಹೋಗುತ್ತಾರೆ ಎಂದರೆ ಸರಿ. ನಾವುಗಳು ಪರಸ್ಪರ ನಮ್ಮ ಮಾತುಗಳನ್ನು ಅವರು, ಅವರ ಮಾತುಗಳನ್ನು ನಾವು ಆಲಿಸುತ್ತೇವೆ ಎಂದರೆ ಸರಿ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.